

# ಭಾರತ–ಪಾಕಿಸ್ತಾನ ಕ್ರಿಕೆಟ್ ಸವಿನೆನಪುಗಳು ಅದು ಬರಿಯ ಆಟವಷ್ಟೇ ಅಲ್ಲ...

■ ವಿಶಾಖ ಎನ್.

ಭಾರತ ಮತ್ತು ಪಾಕಿಸ್ತಾನ ನಡುವಣ ಸಂಘರ್ಷ ಕ್ರಿಕೆಟ್ ಅಂಗಳಕ್ಕೂ ವಿಸ್ತರಣೆಯಾಗಬೇಕು ಎನ್ನುವ ವಾದ ಚಾಲ್ತಿಯಲ್ಲಿದೆ. ಆದರೆ, ಇದೇ ಕ್ರಿಕೆಟ್ ಅನೇಕ ದಶಕಗಳಿಂದ ಉಭಯದೇಶಗಳ ನಡುವಿನ ಸಂಬಂಧದ ತಂತುವಂತೆ ಕೆಲಸ ಮಾಡಿರುವುದನ್ನು ನೆನಪಿಸಿಕೊಳ್ಳಬೇಕು. ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಣ ಕ್ರಿಕೆಟ್ ಬರಿಯ ಆಟವಾಗಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ಉಭಯದೇಶಗಳ ಕ್ರಿಕೆಟ್ ನೆನಪುಗಳನ್ನು ಮೊಗೆದರೆ ಸಂತಸ–ವಿಷಾದ ಎರಡೂ ಒಮ್ಮೆಗೆ ಉಂಟಾಗುತ್ತದೆ.



2018ರ ಏಷ್ಯಾಕಪ್ ಸಂದರ್ಭದಲ್ಲಿ ಭಾರತದ ಕ್ರಿಕೆಟ್ ಅಭಿಮಾನಿ ಸುಧೀರ್ ಕುಮಾರ್ ಹಾಗೂ ಪಾಕಿಸ್ತಾನದ ಕ್ರಿಕೆಟ್ ಅಭಿಮಾನಿ ಮೊಹಮ್ಮದ್ ಬಷೀರ್ ಅವರ ಸ್ನೇಹಲಾಘವ.